# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 739 |
| ಸದಸ್ಯರ ಹೆಸರು | : | ಶ್ರೀ ಯು.ಬಿ.ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : | 20-12-2021 |
| ಉತ್ತರಿಸುವ ಸಚಿವರು | : | ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು. |

| ಕ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ನಾಡಗೀತೆಯನ್ನು ಹಾಡಲು ನಿಗಧಿ ಪಡಿಸಿರುವ ಸಮಯವೆಷ್ಟು; | ಸಮಯ ನಿಗಧಿಪಡಿಸಿರುವುದಿಲ್ಲ. |
| ಆ | ಒಂದೊಂದು ಕಾರ್ಯಕ್ರಮದಲ್ಲೂ ನಾಡಗೀತೆ ಹಾಡುವ ಸಮಯದ ಅವಧಿ ಮೀರುತ್ತಿರುವುದರಿಂದ ಸಭಿಕರು ಹಾಗೂ ಗಣ್ಯರು ಮುಜುಗರಕ್ಕೆ ಒಳಗಾಗುತ್ತಿರುವುದನ್ನು ಸರ್ಕಾರ ಅವಗಾಹಿಸಿದೆಯೇ; | ಹೌದು<br><br>ನಾಡಗೀತೆಯ ಸ್ವರ ಸಂಯೋಜನೆ ಮತ್ತು ಅವಧಿ ಕಡಿತದ ಬಗ್ಗೆ ಸರ್ಕಾರದ ಆದೇಶ ಸಂಖ್ಯೆ: ಕಸಂವಾ 621 ಕಸಧ 2012, ದಿನಾಂಕ:09-09-2021 ರಲ್ಲಿ ಸಾಹಿತಿಗಳು, ಸಂಗೀತ ತಜ್ಞರು, ರಾಗ ಸಂಯೋಜಕರು ಹಾಗೂ ಹಿರಿಯ ಗಾಯಕರ ಸಮಿತಿಯನ್ನು ರಚಿಸಲಾಗಿರುತ್ತದೆ.<br><br>ಸದರಿ ಸಮಿತಿಯು ಸರ್ಕಾರದ ಆದೇಶದಂತೆ ದಿನಾಂಕ: 16-09-2021 ರಂದು ಸಮಿತಿಯ ಸಭೆ ನಡೆಸಿ, ಸಭೆಯಲ್ಲಿ ಅಧ್ಯಕ್ಷರು ಮತ್ತು ಸದಸ್ಯರುಗಳು ಚರ್ಚಿಸಿ ನೀಡಲಾದ ಅಭಿಪ್ರಾಯವನ್ನು ದಾಖಲಿಸಿದ ಸಭಾ ನಡವಳಿಯನ್ನು ಸಲ್ಲಿಸಲಾಗಿದ್ದು, ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಇ | ನಾಡಗೀತೆಗೆ ನಿರ್ದಿಷ್ಟ ಕಾಲಮಿತಿ ನಿಗದಿಪಡಿಸಿ ಗೌರವ ಸೂಚಿಸಲು ಕ್ರಮವಹಿಸಲಾಗುವುದೇ? | ಪರಿಶೀಲನೆಯಲ್ಲಿದೆ. |

ಸಂಖ್ಯೆ:ಕಸಂವಾ 92 ಕವಿಸ 2021

(ವಿ. ಸುನಿಲ್ ಕುಮಾರ್)

ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು